# ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ (ನೊ.)

ಕಲಬುರಗಿ – ೫೮೫ ೧೦೨ – ಕರ್ನಾಟಕ – ಭಾರತ

# HYDERABAD KARNATAKA EDUCATION SOCIETY (R)

KALABURAGI - 585 102 - KARNATAKA - INDIA



INAUGURATION AND LAUNCHING CEREMONY OF HIGHER-END VENTILATORS, PORTABLE X-RAYS AND MONITORS TO THE COVID WARD AT BASAVESHWAR TEACHING AND GENERAL HOSPITAL, KALABURAGI

## ವಾರ್ಷಿಕ ಲೆಕ್ಕ ಪರಿಶೋಧನಾ ವರದಿ – ೨೦೧೯–೨೦

## ANNUAL AUDIT REPORT 2019-20

ರಾಜಕುಮಾರ ಹಂಚನಾಳ
ಚಾರ್ಟರ್ಡ್ ಅಕೌಟಂಟ್

#106, ಚಂದರ ಮಾರ್ಕೆಟ್,
ಸುಪರ ಮಾರ್ಕೆಟ್,
ಕಲಬುರಗಿ–585101
ದೂರವಾಣಿ: 08472–222315

## ಲೆಕ್ಕ ಪರಿಶೋಧನಾ ವರದಿ

ದಿನಾಂಕ 31 ಮಾರ್ಚ್ 2020 ತೇದಿಯಂದಿನ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ (ನೋ) ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜು ಆವರಣ, ಐವಾನ್–ಇ–ಶಾಹಿ ಕಲಬುರಗಿ, ಸ್ಥಿತಿ ವಿವರಣಾ ಪಟ್ಟಿಯನ್ನು ಮತ್ತು ಪ್ರಸ್ತುತ ವರ್ಷದ ಆಯ ವ್ಯಯ ಲೆಕ್ಕವನ್ನು ಮತ್ತು ಜಮಾ ಖರ್ಚುಗಳ ವಿವರವನ್ನು ನಾವು ಪರಿಶೀಲಿಸಿ ಅದನ್ನು ವರದಿ ಮಾಡುತ್ತಿದ್ದೇವೆ.

ಆರ್ಥಿಕ ವ್ಯವಹಾರ ಪಟ್ಟಿ ಸಿದ್ಧಪಡಿಸಲು, ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯು ಹೊಣೆಯಾಗಿರುತ್ತದೆ. ಅವರು ನೀಡುವ ಸತ್ಯ ಹಾಗೂ ಸಮಂಜಸ ಆರ್ಥಿಕ ಸ್ಥಿತಿ ಹಾಗೂ ಸಂಸ್ಥೆಯ ವ್ಯವಹಾರ ನಿರ್ವಹಣೆಯು ಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕ ಪರಿಶೋಧನಾ ನೆಲೆಗಟ್ಟಿನ ಮೇಲಿರುವುದು.

ಈ ಜವಾಬ್ದಾರಿಯ ಸಂಕಲ್ಪವು ಕಾರ್ಯರೂಪ ಮತ್ತು ಪೋಷಣೆಯನ್ನು ಒಳಗೊಂಡಿದ್ದು, ಸಮಂಜಸ ವ್ಯವಹಾರಿಕ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ಪ್ರಸ್ತುತ ಆಂತರಿಕ ನಿಯಂತ್ರಣವನ್ನು ಪಡೆದಿರುವುದರಿಂದ; ಇಲ್ಲಿ ನೀಡಲಾದ ವಿವರಗಳು ತಪ್ಪು ಹಾಗೂ ದೋಷ ಮುಕ್ತವಾಗಿರುತ್ತವೆ.

ನಮ್ಮ ಈ ಪರಿಶೀಲನೆಯನ್ನು ಸಾಮಾನ್ಯವಾಗಿ ಒಪ್ಪಿಕೊಂಡಿರುವ ಭಾರತೀಯ ಲೆಕ್ಕ ಪರಿಶೋಧನಾ ನೆಲೆಗಟ್ಟಿನ ಮೇಲೆ ಕೈಕೊಂಡಿದ್ದೇವೆ. ಈ ನೆಲೆಗಟ್ಟು ಹೇಳಿಕೊಡುವುದೇನೆಂದರೆ ಲೆಕ್ಕ ಪಟ್ಟಿಗಳು ಪ್ರಮುಖವಾದ ದೋಷಗಳಿಂದ ಮುಕ್ತವಾಗಿದೆಯೆಂದು ಭರವಸೆ ಮಾಡಿಕೊಳ್ಳಲು ನಮ್ಮ ಪರಿಶೋಧನೆಯನ್ನು ಮುಂಚಿತವಾಗಿ ಯೋಚಿಸಿ; ಕಾರ್ಯರೂಪಕ್ಕೆ ತರಬೇಕೆಂದು ನಮ್ಮ ಲೆಕ್ಕ ಪರಿಶೋಧನೆಯ ವಿಚಾರ ವಿಮರ್ಶೆ, ಪ್ರಕಟಗೊಂಡ ಲೆಕ್ಕ ಪಟ್ಟಿ ಹಾಗೂ ಖಾತೆಯಲ್ಲಿ ನಮೂದಿಸಿದ ಮೊಬಲಗುಗಳ ಮೇಲಿನ ಸಾಕ್ಷಾಧಾರಗಳನ್ನು ವಿಮರ್ಶೆ ಮಾಡುವವರನ್ನೊಳಗೊಂಡಿರುತ್ತದೆ. ಹಾಗೆಯೇ ಲೆಕ್ಕ ಪರಿಶೋಧನೆಯು ಆಡಳಿತ ಮಂಡಳಿಯು ಒದಗಿಸಿದ ಮಾಹಿತಿಗಳನ್ನು ಆಧರಿಸಿದೆ. ಮಹತ್ವದ ನೀತಿ ಗಮನಾರ್ಹವಾದ ಅಂದಾಜುಗಳನ್ನು ಮತ್ತು ಲೆಕ್ಕಪಟ್ಟಿಯನ್ನು ಪ್ರಕಟಿಸುವ ವಿಧಾನಗಳನ್ನು ಪರಿಶೀಲಿಸುವುದನ್ನೊಳಗೊಂಡಿರುತ್ತದೆ. ಈ ಲೆಕ್ಕ ಪರಿಶೋಧನೆಯು ನಮ್ಮ ವಿವರಣೆಯನ್ನು ವ್ಯಕ್ತಪಡಿಸಲು ಸೂಕ್ತ ಆಧಾರವನ್ನು ಕೊಡುವುದೆಂದು ಭರವಸೆ ಮಾಡಿರುತ್ತೇವೆ.

ನಮ್ಮ ವರದಿ ಹೀಗಿದೆ.

01. ನಮ್ಮ ಲೆಕ್ಕ ಪರಿಶೋಧನೆಗಾಗಿ ಬೇಕಾಗುವ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ವಿವರಣೆಗಳನ್ನು ಪಡೆದುಕೊಂಡು ಲೆಕ್ಕ ಪರಿಶೋಧನೆ ಮಾಡಿದ್ದೇವೆ ಎಂಬುದು ನಮ್ಮ ವಿಶ್ವಾಸ.

02. ಸಂಸ್ಥೆಯ ಕಾನೂನಿನ ಪ್ರಕಾರ ಸರಿಯಾದ ಲೆಕ್ಕಕ್ಕೆ ಬೇಕಾಗುವ ಖಾತೆಯ ಪುಸ್ತಕವನ್ನು ಹೊಂದಿದೆ ಎಂದು ಪುಸ್ತಕಗಳ ಪರಿಶೀಲನೆಯಿಂದ ತಿಳಿದು ಬಂದಿದೆ.

03. ಸಹಮತದೊಂದಿಗೆ ಖಾತೆಯ ಪುಸ್ತಕದಲ್ಲಿರುವ ವರದಿಯ ಆಯ–ವ್ಯಯದ ವಿವರಗಳನ್ನು ತಿಳಿಸುತ್ತದೆ.

04. ನಮಗೆ ಲೆಕ್ಕ ಪರಿಶೋಧನೆಗಾಗಿ ಒದಗಿಸಿರುವ ತಿಳಿವಳಿಕೆಗಳು ಮತ್ತು ವಿವರಣೆಯನ್ವಯ ವಾಗಿಯೂ, ಪುಸ್ತಕಗಳು ಪರಿಶೋಧನೆಯಲ್ಲಿರುವ ನಮ್ಮ ನಿರೀಕ್ಷಣೆಗನ್ವಯವಾಗಿಯೂ ಸಂಸ್ಥೆಯ ಸ್ಥಿರ ವಿವರಣಾ ಪಟ್ಟಿ ಮತ್ತು ಸಂಸ್ಥೆಯ ವ್ಯವಹಾರಗಳ ಬಗೆಗಿನ ನೈಜ ಚಿತ್ರಣವು ಸ್ಪಷ್ಟವಾಗಿರುತ್ತದೆ.

* 31ನೇ ಮಾರ್ಚ್–2020 ನೇ ವರ್ಷದಲ್ಲಿ ತೋರ್ಪಡಿಸಿದ ಸಂಸ್ಥೆಯ ವ್ಯವಹಾರದ ಸ್ಥಿತಿ ವಿವರಣಾ ಪಟ್ಟಿಯು ನೈಜ ಹಾಗೂ ಸಮರ್ಪಕವಾಗಿದೆ.

* ಆಯ ವ್ಯಯದ ವರ್ಷವು 31ನೇ ಮಾರ್ಚ್–2020 ರಂದು ಕೊನೆಗೊಳ್ಳುತ್ತಿದ್ದು; ಇಲ್ಲಿ ಮಂಡಿಸಲಾದ ವಿವರ ಪ್ರಕ್ರಿಯೆಯು ಸದರಿ ದಿನಾಂಕದಂದು ನೈಜ ಹಾಗೂ ಸಮಂಜಸ ಚಿತ್ರಣದೊಂದಿಗೆ ಮುಕ್ತಾಯವಾಗುತ್ತದೆ.

ವಿಷಯಕ್ಕನುಗುಣವಾದ ಅನುಬಂಧದ ಪ್ರತ್ಯೇಕ ಸೂಚನೆಗಳು ಹಾಗೂ ದಿನಾಂಕದೊಂದಿಗೆ ಲೆಕ್ಕ ಪರಿಶೋಧನ ವಿವರಗಳಿರುತ್ತವೆ.

ಸ್ಥಳ : **ಕಲಬುರಗಿ.**
ದಿನಾಂಕ : **12.01.2021**

**ರಾಜಕುಮಾರ ಹಂಚನಾಳ**
ಲೆಕ್ಕ ಪರಿಶೋಧಕರು